**15618** **120 MINUTES**

1. ಇವರುಗಳಲ್ಲಿ ಸಾಂಗತ್ಯದಲ್ಲಿ ಕೃತಿ ರಚನೆ ಮಾಡಿದ ಕವಿಗಳು ಯಾರು?

a. ಷಡಕ್ಷರಿ b. ದೇಪರಾಜ c. ಕೆಂಪುನಾರಾಯಣ d. ಕನಕದಾಸ

ಇವುಗಳಲ್ಲಿ ಸರಿಯಾದ ಉತ್ತರ :

A) a b ಮತ್ತು d B) b ಮತ್ತು d
C) b c ಮತ್ತು d D) a b ಮತ್ತು c

2. ಸತತಂನಂಸಂರರಂಗಂ ನೆರೆದೆಸೆಯೆ..... ವೃತ್ತಮಕ್ಕುಂ

A) ಮತ್ತೇಭವಿಕ್ರೀಡಿತ B) ಮಹಾಸ್ರಗ್ಧರಾ
C) ಸ್ರಗ್ಧರಾ D) ಶಾರ್ದೂಲವಿಕ್ರೀಡಿತ

3. ೧೯೨೪ರ ಹೊತ್ತಿಗೆ 'ಸರ್ವಜ್ಞನ ಸಮಗ್ರ ವಚನಗಳನ್ನು' ಮೊತ್ತಮೊದಲು ಶೋಧಿಸಿ ಪ್ರಕಟಿಸಿದ ವಿದ್ವಾಂಸ ಯಾರು?

A) ಸಂ.ಶಿ. ಭೂಸನೂರಮಠ B) ಫ.ಗು. ಹಳಕಟ್ಟಿ
C) ರೆ. ಚನ್ನಪ್ಪ ಉತ್ತಂಗಿ D) ಶ್ರೀ ಪಾಠಕ್

4. 'ತುಷಾರ' ಇದು

A) ಮಾಸ ಪತ್ರಿಕೆ B) ವಾರ ಪತ್ರಿಕೆ
C) ದಿನ ಪತ್ರಿಕೆ D) ತ್ರೈಮಾಸಿಕ ಪತ್ರಿಕೆ

5. 'ಮೈಮನಗಳ ಸುಳಿಯಲ್ಲಿ' ಈ ಕೃತಿಯ ಕರ್ತೃ

A) ಕೆ.ಶಿವರಾಮ ಕಾರಂತ B) ಎಂ.ಎಸ್. ಪುಟ್ಟಣ್ಣ
C) ಅ.ನ.ಕೃ D) ರಾವ್‌ಬಹದ್ದೂರ್

6. "....ಮನಸಿನ ಮಾಯೆ ವಿಧಿವಿಳಸನದನೆರಂಬಡೆಯೆ ಕೊಂದು ಕೂಗದೆ ನರರಂ"ಈ ಮಾತನ್ನು ಯಾರು ಯಾರಿಗೆ ಹೇಳಿದರು?

A) ಅಭಯಮತಿ – ಅಭಯ ರುಚಿಗೆ B) ಅಮೃತಮತಿ – ಅಷ್ಟವಂಕನಿಗೆ
C) ಅಭಯರುಚಿ – ಮಾರಿದತ್ತನಿಗೆ D) ಮಾರಿದತ್ತ – ಚಂಡಕರ್ಮನಿಗೆ

7. 'ಏಜಾಕ್ಸ್' ಇದು ಯಾರ ನಾಟಕ.

A) ಸಾಫೋಕ್ಲಿಸ್ B) ಯೂರಿಪಿಡೀಸ್
C) ಈಸ್ಕೈಲಸ್ D) ಇಬ್ಸೆನ್

8. 'ಮಾಯಾಲೋಕ'ಇದು ಯಾರ ಕೃತಿ?

A) ಚಂದ್ರಶೇಖರ ಕಂಬಾರ
B) ಪೂರ್ಣಚಂದ್ರತೇಜಸ್ವಿ
C) ಶ್ರೀರಂಗ
D) ಪರ್ವತವಾಣಿ

9. ಕನ್ನಡದ ಮೊದಲ ಮಾಸ ಪತ್ರಿಕೆ ಯಾವುದು?

A) ತಾಯಿನಾಡು
B) ಕರ್ನಾಟಕ ಪ್ರಕಾಶಿಕಾ
C) ಮೈಸೂರು ವೃತ್ತಾಂತ ಬೋಧಿನಿ
D) ಹಿತಬೋಧಿನಿ

10. 'ಒಥೆಲೋ' ನಾಟಕವನ್ನು 'ಪ್ರತಾಪರುದ್ರದೇವ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದವರು ಯಾರು?

A) ಬಸವಪ್ಪಶಾಸ್ತ್ರಿ
B) ಎಂ. ಆನಂದರಾಯ
C) ಶ್ರೀಕಂಠೇಶಗೌಡ
D) ಗುಂಡೋ ಕೃಷ್ಣ ಚುರುಮುರಿ

11. 'ಶ್ರೀಕೃಷ್ಣ ಪಾರಿಜಾತ' ಕರ್ತೃ

A) ಬಿ.ಎಸ್. ಗದ್ದಗಿನಮಠ
B) ಕುಕ್ಕೆ ಕೃಷ್ಣಭಟ್ಟ
C) ಅಪರಾಳತಮ್ಮಣ
D) ಜಿ.ಕೆ. ಮಾಸ್ತರ

12. 'ಸಮಾಚಾರ ಸಂಗ್ರಹ' ಎಂಬ ವಾರ ಪತ್ರಿಕೆಯನ್ನು ಸ್ಥಾಪಿಸಿದವರು ಯಾರು?

A) ಡಿ.ವಿ. ಗುಂಡಪ್ಪ
B) ಪಿ. ಲಂಕೇಶ್
C) ಎಂ. ವೆಂಕಟಕೃಷ್ಣಯ್ಯ
D) ಶ್ರೀನಿವಾಸ ಹಾವನೂರ

13. ಇವು ಕೈಲಾಸಂ ಅವರ ನಾಟಕಗಳು

a. ಶೋಕಚಕ್ರ  b. ಟೊಳ್ಳು–ಗಟ್ಟಿ  c. ಅಮ್ಮಾವ್ರಗಂಡ  d. ವಿಕಡವಿಕ್ರಮರಾಯ

ಇವುಗಳಲ್ಲಿ ಸರಿಯಾದ ಉತ್ತರ :

A) a b ಮತ್ತು d
B) b c ಮತ್ತು d
C) a b ಮತ್ತು c
D) b ಮತ್ತು c

14. 'ಸೂರ್ಯೋದಯ ಪ್ರಕಾಶಿಕಾ' ಈ ದಿನಪತ್ರಿಕೆಯನ್ನು ೧೮೮೫ ರಲ್ಲಿ ಯಾರು ಪ್ರಾರಂಭಿಸಿದರು?

A) ಎಂ. ವೆಂಕಟಕೃಷ್ಣಯ್ಯ
B) ತಿರುಮಲೆ ತಾತಾಚಾರ್ಯ ಶರ್ಮ
C) ಆರ್.ಆರ್. ದಿವಾಕರ್
D) ಬಿ. ನರಸಿಂಗರಾಯ

15. 'ಮಾಸ್ತಿ ವೆಂಕಟೇಶ ಅಯ್ಯಂಗಾರ್' ಅವರ ನಾಟಕ ಇದು

A) ಗೋಕುಲನಿರ್ಗಮನ
B) ಅಪ್ಪ
C) ಕಾಕನಕೋಟೆ
D) ಕದಡಿದ ನೀರು

16. 'ಈಡಿಪಸ್'ನ ತಂದೆ ಯಾರು?

A) ಕ್ರೆಯಾನ್ B) ಯೊಕಾಸ್ತಾ

C) ಲಾಯಿಸ್ D) ಟೈರೀಸಿಯಸ್

17. 'ನಾಟಕ ಸಾಹಿತ್ಯ ಮತ್ತು ರಂಗಭೂಮಿ' ಈ ಕೃತಿಯ ಕರ್ತೃ

A) ತ.ಸು. ಶಾಮರಾಯ B) ಯು.ಆರ್. ಅನಂತಮೂರ್ತಿ

C) ಎಚ್.ಕೆ. ರಂಗನಾಥ್ D) ಗಿರಡ್ಡಿ ಗೋವಿಂದರಾಜು

18. 'ಅಭಿನವ ಭಾರತಿ' ಇದು ಯಾವ ಕೃತಿಗೆ ಬರೆದಿರುವ ವ್ಯಾಖ್ಯಾನ ಗ್ರಂಥ?

A) ನಾಟ್ಯಶಾಸ್ತ್ರ B) ಧ್ವನ್ಯಾಲೋಕ

C) ಕಾವ್ಯಕೌತುಕ D) ರಸಗಂಗಾಧರ

19. ಇವುಗಳಲ್ಲಿ ಸರಿಯಾದುದ್ದನ್ನು ಗುರುತಿಸಿ.

A) ಯಕ್ಷಗಾನ ಪದಕೋಶ – ಅಳಿಯ ಲಿಂಗರಾಜ

B) ಅಂಗದ ಸಂಧಾನ – ಎಂ. ಪ್ರಭಾಕರ ಜೋಶಿ

C) ಪುತ್ರಕಾಮೇಷ್ಟಿ ಪ್ರಸಂಗ – ಪಾರ್ತಿಸುಬ್ಬ

D) ಯಕ್ಷಗಾನ ಮತ್ತು ಬಯಲಾಟ – ಎಂ. ಗೋವಿಂದಪೈ

20. "ಕಾವ್ಯಂಗ್ರಾಹ್ಯಮಲಂಕಾರಾತ್ ಸೌಂದರ್ಯಮಲಂಕಾರಃ"ಎಂದು ಹೇಳಿರುವ ಆಲಂಕಾರಿಕ.

A) ಭಾಮಹ B) ದಂಡಿ

C) ಕುಂತಕ D) ವಾಮನ

21. ದೊಡ್ಡೋರು ಬಂದ್ರೆ ಒದರಿ ಹಾಸ್ತೀವಿ
ಬಡವರು ಬಂದ್ರ ಬಾಗಲಲಿ.......................
ಈ ಗಾದೆಗೆ ಯಾವ ಪದ ಸೇರಿದರೆ ಪೂರ್ಣವಾಗುತ್ತದೆ?

A) ಮಾತಾಡುಸ್ತೀವಿ B) ನಿಲ್ಲಿಸ್ತೀವಿ

C) ಕಳುಸ್ತೀವಿ D) ಬೈಯ್ತೀವಿ

22. 'ಮಾನಸಿಕ ದೂರ' ಸಿದ್ಧಾಂತದ ಪ್ರತಿಪಾದಕ

A) ಅರಿಸ್ಟಾಟಲ್ B) ಎಡ್ವರ್ಡ್ ಬುಲ್ಲೋ

C) ಎಫ್.ಆರ್. ಲೂಯಿಸ್ D) ಬೆನಡಿಟ್ಟೋ ಕ್ರೋಚೆ

23. 'ಸೋಬಾನೆ ಚಿಕ್ಕಮ್ಮನ ಪದಗಳು' ಈ ಕೃತಿಯ ಸಂಪಾದಕರು

A) ಹಲಸಂಗಿ ಗೆಳೆಯರು B) ಆರ್.ಎಸ್. ಪಂಚಮುಖಿ

C) ಎನ್. ತಪಸ್ವಿಕುಮಾರ್ D) ಎಚ್.ಎಲ್. ನಾಗೇಗೌಡ

24. "ಕಲ್ಕಿ! ಕಲ್ಕಿ!" ಎನ್ನುತ ಚೀರಿ
ಕನಸೊಡೆದೆದ್ದೆ!
ಇನ್ನೆಲ್ಲಿಯ ನಿದ್ದೆ?
ಈ ಪದ್ಯ ಸಾಲುಗಳನ್ನು ತೀ.ನಂ.ಶ್ರೀ ಅವರು ಯಾವ ಬಗೆಯ ಧ್ವನಿಗೆ ಉದಾಹರಣೆಯಾಗಿ ನೀಡಿದ್ದಾರೆ?

A) ರಸಧ್ವನಿ
B) ವಸ್ತುಧ್ವನಿ
C) ಅಲಂಕಾರಧ್ವನಿ
D) ದರ್ಶನಧ್ವನಿ

25. ಭರತನ ಪ್ರಕಾರ 'ಸಂಚಾರಿಭಾವ'ಗಳು ಎಷ್ಟು?

A) ಮೂವತ್ತುಮೂರು
B) ಎಂಟು
C) ಒಂಬತ್ತು
D) ಅರುವತ್ತುನಾಲ್ಕು

26. 'ಕಾವ್ಯಾವಲೋಕನ' ಇದು ಯಾರ ಕೃತಿ?

A) ೧ನೆಯ ನಾಗವರ್ಮ
B) ತಿರುಮಲಾರ್ಯ
C) ಭಟ್ಟಾಕಳಂಕ
D) ೨ನೆಯ ನಾಗವರ್ಮ

27. ಇವುಗಳಲ್ಲಿ ಸರಿಯಾದುದನ್ನು ಗುರುತಿಸಿ.

A) ಕಾವ್ಯಾದರ್ಶ – ಭಾಮಹ
B) ಕಾವ್ಯಮೀಮಾಂಸೆ – ಮಮ್ಮಟ
C) ಸಾಹಿತ್ಯ ದರ್ಪಣ – ವಿಶ್ವನಾಥ
D) ಕಾವ್ಯಾಲಂಕಾರ – ವಾಮನ

28. ಇವುಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುವುದಿಲ್ಲ?

A) ಪ್ರಿಫೇಸ್ ಟು ಲಿರಿಕಲ್ ಬ್ಯಾಲೆಡ್ಸ್ – ವರ್ಡ್ಸ್‌ವರ್ತ್
B) ಕಾವ್ಯ ಕಲೆ – ಲಾಂಜೈನೆಸ್
C) ಕೆಥಾರ್ಸಿಸ್ – ಅರಿಸ್ಟಾಟಲ್
D) ವಸ್ತು ಪ್ರತಿರೂಪ – ಟಿ.ಎಸ್. ಎಲಿಯಟ್

29. "ಬಿಳಿ ಕೊಟಡಿಯಲ್ಲಿ
ಕರಿ ಕಳ್ಳನ ಓಡಾಟ
ಹೊರಕ್ಕೆ ಬರಲು ದಾರಿಯೆ ಇಲ್ಲ"– ಈ ಒಗಟಿನ ಅರ್ಥವೇನು?

A) ಬೆಣ್ಣೆ
B) ಸುಣ್ಣ
C) ಕಣ್ಣು
D) ಗೊಣ್ಣೆ

30. 'ದಿ ಸೈನ್ಸ್ ಆಫ್ ಫೋಕ್ಲೋರ್' ಕೃತಿ ಕರ್ತೃ

A) ಅಲೆಗ್ಸಾಂಡರ್ ಕ್ರಾಪ್ಪೆ
B) ಸಿ.ಎಂ. ಚೌರಾ
C) ಕಿಟ್ರೆಡ್ಜ್
D) ವಾರೆನ್ ರಾಬರ್ಟ್

31. 'ವಿಸ್ಮಯ' ಇದು ಯಾವ ರಸದ ಸ್ಥಾಯಿಭಾವ?

A) ಅದ್ಭುತ
B) ವೀರ
C) ಬೀಭತ್ಸ
D) ಭಯಾನಕ

32. ಭಟ್ಟನಾರಾಯಣ 'ವೇಣಿಸಂಹಾರ'ದ ಪ್ರಭಾವ ಈ ಕೃತಿಯ ಮೇಲಾಗಿದೆ.
A) ಶಬರಶಂಕರ ವಿಲಾಸ
B) ಕಿರಾತಾರ್ಜುನೀಯವಿಜಯ
C) ಸಾಹಸಭೀಮವಿಜಯ
D) ಜಗನ್ನಾಥ ವಿಜಯ

33. "Motif-Index of Folk Literature"ಈ ಕೃತಿಯನ್ನು ಆರು ಸಂಪುಟಗಳಲ್ಲಿ ಪ್ರಕಟಿಸಿ ಮಹಾ ಸಾಧನೆಗೈದಿರುವ ಶ್ರೇಷ್ಠ ಜಾನಪದ ವಿದ್ವಾಂಸ ಯಾರು?
A) ಸ್ಟಿತ್ ಥಾಂಸನ್
B) ಸರ್ ವಾಲ್ಟರ್ ಸ್ಕಾಟ್
C) ಹರ್ಡರ್
D) ಗ್ರಿಮ್

34. ಇವುಗಳಲ್ಲಿ ದ.ರಾ.ಬೇಂದ್ರೆಯವರ ಯಾವ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ?
A) ಗಂಗಾವತರಣ
B) ಅರಳು–ಮರಳು
C) ಸಖೀಗೀತ
D) ನಾದಲೀಲೆ

35. 'ಸ್ಫಿಂಕ್ಸ್' ಮಾರಿಯ ಒಗಟುಗಳನ್ನು ಬಿಡಿಸಿ ಥೀಬ್ಸ್ ನಗರವನ್ನು ಅದರಿಂದ ಮುಕ್ತಗೊಳಿಸಿದವ ಯಾರು?
A) ಥೀಸಿಯಸ್
B) ಈಡಿಪಸ್
C) ಎತೆಯೊಕ್ಲೆಸ್
D) ಪಾಲಿಬಸ್

36. "ವಿಭಾವಾನುಭಾವವ್ಯಭಿಚಾರಿಸಂಯೋಗಾದ್ರಸನಿಷ್ಪತ್ತಿಃ" ಈ ಸೂತ್ರದ ಪ್ರತಿಪಾದಕ
A) ಅಭಿನವಗುಪ್ತ
B) ಭರತ
C) ಶ್ರೀಶಂಕುಕ
D) ಭಟ್ಟನಾಯಕ

37. 'ರಸೋಲ್ಲಾಸ' ಇದು ಯಾರ ಕೃತಿ?
A) ಕುವೆಂಪು
B) ಎನ್. ಬಾಲಸುಬ್ರಹ್ಮಣ್ಯಂ
C) ವಿ.ಎಂ. ಇನಾಂದಾರ್
D) ಕೆ. ಕೃಷ್ಣಮೂರ್ತಿ

38. 'ಸೂರ್ಯೋದಯ' ಇದು ಯಾವ ಸಂಧಿ?
A) ಸವರ್ಣದೀರ್ಘಸಂಧಿ
B) ಆದೇಶ ಸಂಧಿ
C) ಗುಣಸಂಧಿ
D) ಯಣ್‌ಸಂಧಿ

39. ಕನ್ನಡದ ಮೊತ್ತಮೊದಲ ವ್ಯಾಕರಣ ಗ್ರಂಥ ಇದು.
A) ಕವಿರಾಜಮಾರ್ಗ
B) ಶಬ್ದಸ್ಮೃತಿ
C) ಕರ್ಣಾಟಕ ಶಬ್ದಾನುಶಾಸನ
D) ಕರ್ನಾಟಕ ಭಾಷಾಭೂಷಣ

40. 'ಧರ್ಮರಾಯ' ಇದು
A) ರೂಢನಾಮ
B) ಅಂಕಿತನಾಮ
C) ಅನ್ವರ್ಥನಾಮ
D) ಭಾವನಾಮ

41. ಕೇಶಿರಾಜನ ಪ್ರಕಾರ **'ತೊಡೆಗಳ್'** ಎಂಬುದು

A) ಏಕವಚನ B) ಬಹುವಚನ

C) ದ್ವಿವಚನ D) ಗುಣವಚನ

42. ಇದು ಕರ್ಮಣಿ ರೂಪ.

A) ಮಾಡಬೇಕಾಗುವುದು B) ಮಾಡಲ್ಪಡುತ್ತದೆ

C) ಮಾಡಲಾಗುತ್ತದೆ D) ಮಾಡುತ್ತದೆ

43. **'ಮೆಲ್ವಾತು'** ಇದು ಯಾವ ಸಮಾಸ?

A) ಬಹುವ್ರೀಹಿ B) ಕರ್ಮಧಾರೆಯ

C) ಕ್ರಿಯಾಸಮಾಸ D) ಅಂಶಿಸಮಾಸ

44. **'ಮನ್ವಂತರ'** ಇದು ಯಾವ ಭಾಷೆಯ ಪದ?

A) ಹಿಂದೂಸ್ಥಾನಿ B) ಇಂಗ್ಲಿಷ್

C) ಸಂಸ್ಕೃತ D) ಪರ್ಷಿಯನ್

45. ಇವು ಕನ್ನಡದಲ್ಲಿರುವ ಅನ್ಯದೇಶಿ ಪದಗಳು

a) ಅನ್ನ b) ತಿಂಗಳ c) ದಿವಾನ d) ಕಚೇರಿ

ಇವುಗಳಲ್ಲಿ ಸರಿಯಾದ ಉತ್ತರ :

A) b c ಮತ್ತು d B) a c ಮತ್ತು d

C) a b ಮತ್ತು c D) a b ಮತ್ತು d

46. **'ಕನ್ನಡಿಯೊಳಗಿನ ಗಂಟು'** ಈ ನುಡಿಗಟ್ಟಿನ ಅರ್ಥವೇನು?

A) ಅಲಭ್ಯವಾದದ್ದು B) ಲಭ್ಯವಾದದ್ದು

C) ಕಾಣುವಂತಹದ್ದು D) ಇಲ್ಲದಿರುವಂತಹದ್ದು

47. **'ನಟ್ಟನಡುವೆ'** ಇದು

A) ದ್ವಿರುಕ್ತಿ B) ಜೋಡುನುಡಿ

C) ಅನುಕರಣಾವ್ಯಯ D) ಕೃದಂತಭಾವನಾಮ

48. **'ಇಂಡಿಯನ್ ಆಂಟಿಕ್ವೇರಿ'**ಯ ಐದು ಸಂಪುಟಗಳಲ್ಲಿ 'A Selection of Kannada Ballads' ಎಂಬುದಾಗಿ ಲಾವಣಿಗಳನ್ನು ಸಂಗ್ರಹಿಸಿಕೊಟ್ಟಿರುವ ವಿದ್ವಾಂಸ

A) ಇ.ಪಿ. ರೈಸ್ B) ಜೆ.ಎಫ್. ಫ್ಲೀಟ್

C) ಜೆ. ಹೋಬರ್ D) ಜಿ. ವೈಗಲ್

49. 'History of Kannada language' ಈ ಕೃತಿಯ ಲೇಖಕರು

A) ಜಿ.ಎಸ್. ಗಾಯಿ B) ಗುಂಡರ್ಟ್
C) ಶ್ರೀರಂಗಪಟ್ಟಣದ ಕೃಷ್ಣಮಾಚಾರಿ D) ಆರ್. ನರಸಿಂಹಾಚಾರ್ಯ

50. ಧಾತುಗಳಿಗೆ ಕೃತ್ ಪ್ರತ್ಯಯಗಳು ಸೇರಿ ___ ಎನಿಸುತ್ತವೆ.

A) ಕೃದಂತ B) ತದ್ಧಿತಾಂತ
C) ಅವ್ಯಯ D) ನಾಮಪದ

51. 'ಬಂದರ್ರಾಮರ್' ಇದು

A) ಶ್ರುತಿಕಷ್ಟಸಂಧಿ B) ಅರಿಸಮಾಸ
C) ಸವರ್ಣದೀರ್ಘಸಂಧಿ D) ದ್ವಂದ್ವ ಸಮಾಸ

52. 'ಶಬ್ದಮಣಿದರ್ಪಣ'ವನ್ನು ಮೊತ್ತಮೊದಲಿಗೆ ಸಂಶೋಧಿಸಿ ಪ್ರಕಟಿಸಿದ ಐರೋಪ್ಯ ವಿದ್ವಾಂಸ

A) ಜಾನ್ ಗೇರೆಟ್ B) ಬಿ.ಎಚ್. ರೈಸ್
C) ಜಾನ್ ಹೇಂಡ್ಸ್ D) ಬಿ.ಎಲ್. ರೈಸ್

53. ಇವುಗಳಲ್ಲಿ ಕನ್ನಡದ ಉಪಭಾಷೆ ಯಾವುದು?

A) ಪರ್ಜಿ B) ಕೋಲಾಮಿ
C) ಬಡಗ D) ಗೋಂಡಿ

54. 'ನೀನು ನೀವು' ಇವು ಯಾವ ಬಗೆಯ ಸರ್ವನಾಮಗಳು?

A) ಉತ್ತಮ ಪುರುಷ B) ಮಧ್ಯಮಪುರುಷ
C) ಪ್ರಥಮ ಪುರುಷ D) ಅನ್ಯ ಪುರುಷ

55. 'ಗದ್ದೆ' ಶಬ್ದದ ಹಳಗನ್ನಡ ರೂಪ

A) ಕಟ್ದೆ B) ಗಟ್ದೆ
C) ಗಳ್ದೆ D) ಗರ್ದೆ

56. ಟ್ ಠ್ ಡ್ ಢ್ ಣ್ ಇವು

A) ಕಂಠ್ಯ ವರ್ಣಗಳು B) ಮೂರ್ಧನ್ಯವರ್ಣಗಳು
C) ಊಷ್ಮವರ್ಣಗಳು D) ದಂತ್ಯ ವರ್ಣಗಳು

57. 'ತೊದ' ಮತ್ತು 'ಕೋತ' ಇವು

A) ದಕ್ಷಿಣ ದ್ರಾವಿಡ ಭಾಷೆಗಳು B) ಉತ್ತರ ದ್ರಾವಿಡ ಭಾಷೆಗಳು
C) ಮಧ್ಯದ್ರಾವಿಡ ಭಾಷೆಗಳು D) ಮೂಲ ದ್ರಾವಿಡ ಭಾಷೆಗಳು

58. ‘ಕಂಪ್ಯೂಟರ್ ಲೋಕದಲ್ಲಿ’ ಈ ಕೃತಿಯ ಕರ್ತೃ

A) ಆರ್. ಶ್ರೀಧರ  B) ಧನಂಜಯ
C) ಸುಧಾಮೂರ್ತಿ  D) ಚಂದ್ರಶೇಖರ ಕಂಬಾರ

59. ಕೇಶಿರಾಜನು ಹೇಳಿರುವ ಕನ್ನಡದ ಅಸಾಧಾರಣ ಲಕ್ಷಣಗಳಲ್ಲಿ ಇದು ಒಂದೆನಿಸಿದೆ.

A) ಗಮಕಸಮಾಸ  B) ಬಹುವ್ರೀಹಿಸಮಾಸ
C) ಅರಿಸಮಾಸ  D) ಅಂಶಿಸಮಾಸ

60. ‘ಅಗ್ರತಾಂಬೂಲ’ ಎಂದರೆ

A) ಎಳೆ ಅಡಿಕೆ  B) ವಿಳ್ಯೆದೆಲೆ
C) ಮೊದಲ ಮರ್ಯಾದೆ  D) ಬೀಳ್ಕೊಡು

61. ಇಂಗ್ಲಿಷ್‌ನ “ದಿ ಬ್ರಿಜ್ ಆಫ್ ಸೈಸ್” ಕವಿತೆಯನ್ನು ಬಿ.ಎಂ.ಶ್ರೀ ಅವರು ಕನ್ನಡಕ್ಕೆ ಏನೆಂದು ಅನುವಾದಿಸಿಕೊಟ್ಟಿದ್ದಾರೆ?

A) ಕಾರಿಹೆಗ್ಗಡೆಯ ಮಗಳು  B) ದುಃಖಸೇತು
C) ನನ್ನ ಮೇರಿ  D) ಬಾನಾಡಿ

62. ೮೧ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದವರು ಯಾರು?

A) ಸಿ.ಪಿ. ಕೃಷ್ಣಕುಮಾರ್  B) ಜಿ. ವೆಂಕಟಸುಬ್ಬಯ್ಯ
C) ಸಿದ್ಧಲಿಂಗಯ್ಯ  D) ನಾ. ಡಿಸೋಜ

63. ‘ಅಪರವಯಸ್ಕನ ಅಮೇರಿಕಾ ಯಾತ್ರೆ’ ಇದು ಯಾರ ಪ್ರವಾಸ ಕಥನ?

A) ಗೊರೂರು ರಾಮಸ್ವಾಮಿ ಅಯ್ಯಂಗಾರ್  B) ಎ.ಎನ್. ಮೂರ್ತಿರಾವ್
C) ಜಿ.ಎಸ್. ಶಿವರುದ್ರಪ್ಪ  D) ಪ್ರಭುಶಂಕರ

64. “ಬಳೆಗಾರ ಚೆನ್ನಯ್ಯ ಬಾಗಿಲಿಗೆ ಬಂದಿಹೆನು... ಒಳಗೆ ಬರಲಪ್ಪಣೆಯೆ ದೊರೆಯೆ?” ಈ ಪದ್ಯ ಸಾಲುಗಳು ಬರುವ ಕೃತಿ

A) ನನ್ನನಲ್ಲ  B) ಗಣೇಶದರ್ಶನ
C) ಮೈಸೂರು ಮಲ್ಲಿಗೆ  D) ರತ್ನನ ಪದಗಳು

65. ‘ಪರಾವಸು’ ಮತ್ತು ‘ಅರವಸು’ ಇವರು ಯಾರ ಮಕ್ಕಳು?

A) ಭಾರಧ್ವಾಜ  B) ಪ್ರಜಾಪತಿ
C) ರೈಭ್ಯ  D) ದಕ್ಷಬ್ರಹ್ಮ

66. ‘ಮನುಕುಲದ ಹಾಡು’ ಇದು ಯಾರ ಕವನ ಸಂಕಲನ?

A) ಎಚ್.ಎಸ್. ವೆಂಕಟೇಶಮೂರ್ತಿ  B) ಕೆ.ವಿ. ತಿರುಮಲೇಶ್
C) ಚಂದ್ರಶೇಖರ ಪಾಟೀಲ  D) ಗಂಗಾಧರ ಚಿತ್ತಾಲ

67. 'ಆನಂದ ಕಂದ' ಇದು ಯಾರ ಕಾವ್ಯನಾಮ?

A) ಬೆಟಗೇರಿ ಕೃಷ್ಣಶರ್ಮ
B) ಸಿದ್ಧಯ್ಯಪುರಾಣಿಕ
C) ಮಧುರಚೆನ್ನ
D) ಜಿ.ಬಿ. ಜೋಶಿ

68. ಗೋಪಾಲಕೃಷ್ಣ ಅಡಿಗರ 'ಕಟ್ಟುವೆವು ನಾವು' ಕೃತಿಗೆ ಮುನ್ನುಡಿ ಬರೆದಿರುವ ಕವಿ ಇವರು

A) ಬಿ.ಸಿ. ರಾಮಚಂದ್ರಶರ್ಮ
B) ಸುಮತೀಂದ್ರನಾಡಿಗ
C) ಪು.ತಿ.ನ
D) ದ.ರಾ. ಬೇಂದ್ರೆ

69. ಇವುಗಳಲ್ಲಿ ಸರಿಯಾದುದನ್ನು ಗುರುತಿಸಿ:

A) ಉತ್ತರರಾಮಚರಿತೆ – ರಾಮಚಂದ್ರದೇವ
B) ಮ್ಯಾಕ್‌ಬೆತ್ – ಮೊಲಿಯರ್
C) ದೊರೆ ಈಡಿಪಸ್ – ಪಿ. ಲಂಕೇಶ್
D) ಭಾರತೀಯ ಪತ್ರಿಕೋದ್ಯಮ – ಶ್ರೀನಿವಾಸ ಹಾವನೂರ

70. 'ಅರ್ಜುನ–ಬಭ್ರುವಾಹನ'ಇವರ ಕಾಳಗ ಬರುವ ಕೃತಿ ಇದು

A) ಗದುಗಿನ ಭಾರತ
B) ಚಿತ್ರಾಂಗದ
C) ಪಂಪಭಾರತ
D) ಗದಾಯುದ್ಧ

71. "ಕಡೆಗೀಲಿಲ್ಲದೆ ಬಂಡಿ ಹೊಡೆಗೆಡೆಯದೆ ಮಾಣ್ಬುದೆ ಕಡೆಗೀಲು ಬಂಡಿಗಾಧಾರ" ವಚನದ ಕರ್ತೃ

A) ಅಲ್ಲಮಪ್ರಭು
B) ಬಸವಣ್ಣ
C) ಅಕ್ಕಮಹಾದೇವಿ
D) ದೇವರದಾಸಿಮಯ್ಯ

72. ಸಂಚಿಯ ಹೊನ್ನಮ್ಮನ 'ಹದಿಬದೆಯಧರ್ಮ' ಕೃತಿ ಯಾವ ಛಂದಸ್ಸಿನಲ್ಲಿ ರಚಿತವಾಗಿದೆ?

A) ವಾರ್ಧಕ ಷಟ್ಪದಿ
B) ಭಾಮಿನಿ ಷಟ್ಪದಿ
C) ಕಂದಪದ್ಯ
D) ಸಾಂಗತ್ಯ

73. 'ಸುಪ್ರತೀಕ ಗಜ'ದ ವರ್ಣನೆ ಬರುವ ಕೃತಿ ಇದು

A) ಕರ್ಣಾಟಕ ಭಾರತ ಕಥಾಮಂಜರಿ
B) ತುರಂಗಭಾರತ
C) ಸಾಳ್ವಭಾರತ
D) ಜೈಮಿನಿ ಭಾರತ

74. 'ಅರಮನೆ' ಇದು ಯಾರ ಕೃತಿ?

A) ಶ್ರೀ ಕೃಷ್ಣ ಆಲನಹಳ್ಳಿ
B) ಕುಂ.ವೀರಭದ್ರಪ್ಪ
C) ಎಸ್.ಎಲ್. ಭೈರಪ್ಪ
D) ಶಾಂತಿನಾಥ ದೇಸಾಯಿ

75. 'ಸಾವಕವ್ವ'ನ ಪಾತ್ರ ಬರುವ ಕೃತಿ

A) ಕುಸುಮ ಬಾಲೆ
B) ಒಡಲಾಳ
C) ಅಮಾಸ
D) ಘಟಶ್ರಾದ್ಧ

76. ಸರಿಯಾದುದನ್ನು ಗುರುತಿಸಿ.

A) ಹಣತೆ – ಪಂಜೆ ಮಂಗೇಶರಾವ್

B) ಚಿಂತಾಮಣಿಯಲ್ಲಿ ಕಂಡಮುಖ – ಪು.ತಿ.ನ

C) ಅನಾಮಿಕ ಆಂಗ್ಲರು – ಕೆ.ಎಸ್. ನಿಸಾರ್ ಅಹಮದ್

D) ಜೀವಧ್ವನಿ – ಜಿ.ಪಿ. ರಾಜರತ್ನಂ

77. 'ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ;
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ.......'ಈ ವಚನದ ಕರ್ತೃ ಯಾರು?

A) ಚನ್ನಬಸವಣ್ಣ

B) ಅಂಬಿಗರ ಚೌಡಯ್ಯ

C) ಬಸವಣ್ಣ

D) ಸಕಲೇಶ ಮಾದರಸ

78. ಎಂ.ಕೆ. ಇಂದಿರಾ ಅವರ ಕಾದಂಬರಿ ಇದು.

A) ಹಣ್ಣೆಲೆ ಚಿಗುರಿದಾಗ

B) ಮಾಧವಿ

C) ಚಂದ್ರಗಿರಿಯ ತೀರದಲ್ಲಿ

D) ಫಣಿಯಮ್ಮ

79. ಭಾರತದ ಪ್ರಪ್ರಥಮ ಪತ್ರಿಕೆ ಯಾವುದು?

A) ಬೆಂಗಾಲ್ ಗೆಜೆಟ್

B) ಬೆಂಗಳೂರು ಗೆಜೆಟ್

C) ಸಮಾಚಾರ ದರ್ಪಣ

D) ಮಂಗಳೂರು ಸಮಾಚಾರ

80. 'ಹನ್ನೆರಡನೆಯ ಶತಮಾನದ ಬಸವಣ್ಣ–ಬಿಜ್ಜಳರ ಸಮಸ್ಯೆ'ಗಳನ್ನು ಒಂದು ಪ್ರೇಮ ಪ್ರಕರಣದ ಮೂಲಕ ವಿವರಿಸುವ ನಾಟಕ ಯಾವುದು?

A) ನಾನೇ ಬಿಜ್ಜಳ

B) ಕ್ರಾಂತಿಕಲ್ಯಾಣ

C) ಸಂಕ್ರಾಂತಿ

D) ಮಹಾಚೈತ್ರ

81. ಇವರು ಪ್ರಗತಿಶೀಲಸಾಹಿತ್ಯದ ಲೇಖಕರು

A) ಅನಕೃ – ತರಾಸು – ಜಿ.ಎಸ್. ಎಸ್. – ದೇವುಡು

B) ತರಾಸು – ಬಸವರಾಜಕಟ್ಟಿಮನಿ – ನಿರಂಜನ – ಪರ್ವತವಾಣಿ

C) ಬಸವರಾಜ ಕಟ್ಟಿಮನಿ – ತರಾಸು – ನಿರಂಜನ – ಅರ್ಚಕ ವೆಂಕಟೇಶ್

D) ಚದುರಂಗ – ಕುಮಾರ ವೆಂಗಣ್ಣ – ನಾಡಿಗೇರ ಕೃಷ್ಣರಾವ್ – ಎಚ್.ಎಂ. ಚನ್ನಯ್ಯ

82. ರುದ್ರಭಟ್ಟನ 'ಜಗನ್ನಾಥ ವಿಜಯ'ದ ಷಷ್ಠಾಶ್ವದಲ್ಲಿ ಬರುವ ಪ್ರಮುಖ ಪ್ರಸಂಗ ಇದು.

A) ಜರಾಸಂಧಯುದ್ಧ

B) ಸಾಲ್ವವಧೆ

C) ಕುವಲಯಾಪೀಡ ಸಂಹಾರ

D) ಶಿಶುಪಾಲವಧೆ

83. "....ಕುಲಂ ಕುಲಮಲ್ತು ಚಲಂ ಕುಲಂ ಗುಣಂ ಕುಲಮಭಿಮಾನಮೊಂದೆ.... ಕುಲಮಣ್ಮುಕುಲಂ...."ಹೀಗೆಂದು ಯಾರು ಯಾರಿಗೆ ಹೇಳಿದರು?

A) ದ್ರೋಣ – ಕರ್ಣನಿಗೆ
B) ಭೀಷ್ಮ – ಕರ್ಣನಿಗೆ
C) ಕರ್ಣ – ದ್ರೋಣನಿಗೆ
D) ಕರ್ಣ – ಭೀಷ್ಮನಿಗೆ

84. ಹರಿಹರನ ಆರಾಧ್ಯ ದೈವ

A) ಗದುಗಿನ ವೀರನಾರಾಯಣ
B) ಹಂಪೆಯ ವಿರೂಪಾಕ್ಷ
C) ಕಾಗಿನೆಲೆ ಆದಿದೇಶವ
D) ಪುರಂದರ ವಿಠಲ

85. ಅಮೇರಿಕದ ಮಿನಿಯಾಪೋಲಿಸ್ ನಗರದ 'ದಿ ಗ್ರಥೀ ಥಿಯೇಟರ್' ನಾಟ್ಯ ಸಂಸ್ಥೆಯವರ ಕೋರಿಕೆಯ ಮೇರೆಗೆ ರಚಿತವಾಗಿರುವ ನಾಟಕ

A) ಜೋಕುಮಾರಸ್ವಾಮಿ
B) ಸಂಗ್ಯಾ–ಬಾಳ್ಯಾ
C) ತುಘಲಕ್
D) ಅಗ್ನಿ ಮತ್ತು ಮಳೆ

86. ಎಂ.ಗೋವಿಂದಪೈ ಅವರ 'ವೈಶಾಖಿ' ಕಾವ್ಯದ ನಾಯಕ

A) ಯೇಸುಕ್ರಿಸ್ತ
B) ಶ್ರೀರಾಮ
C) ಬುದ್ಧ
D) ಬಸವಣ್ಣ

87. ಕರ್ಣಪರ್ವದ ಹತ್ತನೆಯ ಸಂಧಿಯಲ್ಲಿ ಬರುವ ಪ್ರಮುಖ ಪ್ರಸಂಗ ಇದು

A) ಶಲ್ಯ–ಕರ್ಣರ ಸಂಘರ್ಷ
B) ಭೀಮನಿಂದ ಕರ್ಣ ಪರಾಭವ
C) ಕರ್ಣನ ಸೇನಾಧಿಪತ್ಯ
D) ಸುಷೇಣನನ್ನು ಭೀಮ ಕೊಂದದ್ದು

88. 'ಶ್ರೀರಾಮಾಶ್ವಮೇಧ' ಕೃತಿಯ ಮುಖ್ಯ ಆಕರ ಗ್ರಂಥ ಇದು.

A) ವಾಲ್ಮೀಕಿ ರಾಮಾಯಣ
B) ತೊರವೆ ರಾಮಾಯಣ
C) ಶೇಷ ರಾಮಾಯಣ
D) ಕುಮುದೇಂದು ರಾಮಾಯಣ

89. ಭಾಮಿನಿ ಷಟ್ಪದಿಯಲ್ಲಿ ಈ ಕವಿಗಳು ಕೃತಿಗಳನ್ನು ರಚಿಸಿದ್ದಾರೆ.

A) ಕುಮಾರವ್ಯಾಸ, ಚಾಮರಸ, ಕನಕದಾಸ
B) ಕುಮಾರವ್ಯಾಸ, ಚಾಮರಸ, ನಂಜುಂಡ
C) ಕುಮಾರ ವಾಲ್ಮೀಕಿ, ಕನಕದಾಸ, ಷಡಕ್ಷರಿ
D) ಲಕ್ಷ್ಮೀಶ, ಭಾಸ್ಕರ, ನಿಜಗುಣಶಿವಯೋಗಿ

90. "ಗಿಳಿಯು ಪಂಜರದೊಳಿಲ್ಲ" ಈ ಕೀರ್ತನೆಯ ಕರ್ತೃ

A) ಪುರಂದರದಾಸರು
B) ಜಗನ್ನಾಥದಾಸರು
C) ವ್ಯಾಸರಾಯರು
D) ಕನಕದಾಸರು

91. 'ಹರಿಶ್ಚಂದ್ರ ಕಾವ್ಯ'ದಲ್ಲಿ ಬರುವ 'ಚಂದ್ರಮತಿ ಪ್ರಲಾಪ' ಯಾವ ಛಂದಸ್ಸಿನಲ್ಲಿ ರಚಿತವಾಗಿದೆ?
- A) ವಾರ್ಧಕ ಷಟ್ಪದಿ ಮತ್ತು ಲಲಿತ ರಗಳೆ
- B) ವಾರ್ಧಕ ಷಟ್ಪದಿ ಮತ್ತು ಉತ್ಸಾಹ ರಗಳೆ
- C) ವಾರ್ಧಕ ಷಟ್ಪದಿ ಮತ್ತು ಮಂದಾನಿಲ ರಗಳೆ
- D) ವಾರ್ಧಕ ಷಟ್ಪದಿ ಮತ್ತು ಸರಳ ರಗಳೆ

92. ಇವುಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುವುದಿಲ್ಲ?
- A) ಶಿಖರಸೂರ್ಯ – ಚಂದ್ರಶೇಖರ ಕಂಬಾರ
- B) ಕ್ರೌಂಚ ಪಕ್ಷಿಗಳು – ಸಾರಾ ಅಬೂಬಕರ್
- C) ಯುಗಸಂಧ್ಯಾ – ಸುಜನಾ
- D) ದ್ಯಾವಾ – ಪೃಥಿವೀ – ವಿ.ಕೃ. ಗೋಕಾಕ್

93. 'ಶಿಲಾತಪಸ್ವಿ' ಕವಿತೆಯ ಕರ್ತೃ
- A) ಕುವೆಂಪು
- B) ಡಿ.ವಿ.ಜಿ
- C) ಪು.ತಿ.ನ
- D) ಕಡಂಗೋಡ್ಲು ಶಂಕರಭಟ್ಟ

94. ಪಂಪನ ಆಶ್ರಯ ದೊರೆ
- A) ಮೂರನೆಯ ಕೃಷ್ಣ
- B) ಇಮ್ಮಡಿ ವೀರಬಲ್ಲಾಳ
- C) ವೇಮುಲವಾಡದ ಅರಿಕೇಸರಿ
- D) ಇಜೀವ ಬೆಡಂಗಸತ್ಯಾಶ್ರಯ

95. "……….. ನಿನ್ನಂ ಪೆತ್ತಳ್ ಮೊಲೆವೆತ್ತಳೆ ವೀರಜನನಿವೆಸರಂಪೆತ್ತಳ್" ಈ ಮಾತನ್ನು ದುರ್ಯೋಧನ ಯಾರನ್ನು ಕುರಿತು ಹೇಳಿದ್ದಾನೆ?
- A) ಲಕ್ಷಣಕುಮಾರನಿಗೆ
- B) ಅಭಿಮನ್ಯುವಿಗೆ
- C) ದುಶ್ಯಾಸನನಿಗೆ
- D) ಕರ್ಣನಿಗೆ

96. 'ಜಾತಿಹೀನನ ಮನೆಯ …………<br>ಜಾತಿವಿಜಾತಿ ಎನಬೇಡ ದೇವನೊಲಿದಾತನೆ<br>ಜಾತ ಸರ್ವಜ್ಞ' ಬಿಟ್ಟಿರುವ ಜಾಗಕ್ಕೆ ಯಾವ ಮಾತು ಸೂಕ್ತವಾದದ್ದಾಗಿದೆ?
- A) ಜ್ಯೋತಿ ತಾ ಹೀನವೆ
- B) ಮಾತು ತಾ ಹೀನವೆ
- C) ಕ್ಷೀರ ತಾ ಹೀನವೆ
- D) ನೀರು ತಾ ಹೀನವೆ

97. 'ಛಂದಸ್ಸಾರ' ಕೃತಿಯ ಕರ್ತೃ
- A) ೧ನೆಯ ನಾಗವರ್ಮ
- B) ಈಶ್ವರ
- C) ಗುಣಚಂದ್ರ
- D) ಕವಿರಾಜ

98. 'ಸಗರ ಚಕ್ರವರ್ತಿಯ' ಕಥೆ ಬರುವ ಕೃತಿ
- A) ಆದಿಪುರಾಣ
- B) ಅಜಿತಪುರಾಣ
- C) ಶಾಂತೀಶ್ವರಪುರಾಣ
- D) ಪುಷ್ಪದಂತಪುರಾಣ

99. "ಮಹಾಶ್ವೇತೆ–ಪುಂಡರೀಕ ಕಾದಂಬರಿ–ಚಂದ್ರಾಪೀಡ"– ಈ ಪಾತ್ರಗಳು ಬರುವ ಕೃತಿ

A) ಕರ್ಣಾಟಕ ಕಾದಂಬರಿ
B) ಕರ್ಣಾಟಕ ಭಾರತ ಕಥಾಮಂಜರಿ
C) ಕರ್ಣಾಟಕ ಅಭಿಜ್ಞಾನ ಶಾಕುಂತಲ
D) ಕರ್ಣಾಟಕ ಪಂಚತಂತ್ರ

100. ಇವರು ಕವಿಚಕ್ರವರ್ತಿಗಳು

A) ಪಂಪ ಪೊನ್ನ ರನ್ನ
B) ಪೊನ್ನ ರನ್ನ ಜನ್ನ
C) ಪಂಪ ರನ್ನ ನಾಗಚಂದ್ರ
D) ಪೊನ್ನ ರನ್ನ ನಯಸೇನ

101. ನಾಗವರ್ಮನ ಪ್ರಕಾರ 'ವಿಚಿತ್ರ ತ್ರಿಪದಿ'ಯ ಹನ್ನೊಂದನೆಯ ಸ್ಥಾನದಲ್ಲಿ ಯಾವ ಗಣ ಬರುತ್ತದೆ?

A) ಬ್ರಹ್ಮಗಣ
B) ವಿಷ್ಣುಗಣ
C) ವಿಷಮಗಣ
D) ರುದ್ರಗಣ

102. 'ಬಸವಪುರಾಣ' ಈ ಕೃತಿಯ ಕರ್ತೃ

A) ಹರಿಹರ
B) ಚಾಮರಸ
C) ಭೀಮಕವಿ
D) ವಿರೂಪಾಕ್ಷ

103. 'ಛಂದೋವಿಕಾಸ' ಈ ಕೃತಿಯ ಲೇಖಕರು.

A) ಟಿ.ವಿ. ವೆಂಕಟಚಲಶಾಸ್ತ್ರೀ
B) ಡಿ.ಎಸ್. ಕರ್ಕಿ
C) ಸೇಡಿಯಾಪು ಕೃಷ್ಣಭಟ್ಟ
D) ತೀ.ನಂ.ಶ್ರೀ

104. 'ದಶಾನನ ಸ್ವಪ್ನಸಿದ್ಧಿ' ಪ್ರಸಂಗ ಬರುವ ಕೃತಿ

A) ಶ್ರೀರಾಮಾಯಣದರ್ಶನಂ
B) ರಾಮಚರಿತಮಾನಸ
C) ಶ್ರೀರಾಮಪಟ್ಟಾಭಿಷೇಕ
D) ಅದ್ಭುತ ರಾಮಾಯಣ

105. ಈಶನ ಕರುಣೆಯ
ನಾಶಿಸು ವಿನಯದಿ
ದಾಸನ ಹಾಗೆಯೇ ನೀ ಮನವೇ – ಈ ಪದ್ಯ ಯಾವ ಷಟ್ಪದಿಯಲ್ಲಿದೆ?

A) ಕುಸುಮಷಟ್ಪದಿ
B) ಭೋಗಷಟ್ಪದಿ
C) ಶರಷಟ್ಪದಿ
D) ಭಾಮಿನಿ ಷಟ್ಪದಿ

106. "ವಸುಷೇಣ–ಸುನಂದೆ–ಚಂಡಶಾಸನ" ಈ ಪಾತ್ರಗಳು ಯಾವ ಕೃತಿಯಲ್ಲಿ ಕಂಡುಬರುತ್ತವೆ?

A) ಮಲ್ಲಿನಾಥಪುರಾಣ
B) ವರ್ಧಮಾನಪುರಾಣ
C) ಚಾವುಂಡರಾಯಪುರಾಣ
D) ಅನಂತನಾಥಪುರಾಣ

107. "ಗಾಯಕಂ ಪಾಡೆ ದೇವಂ ಮೆಚ್ಚಿದಂ" ಇದನ್ನು ಕೇಶಿರಾಜ ಯಾವ ವಿಭಕ್ತಿ ಪ್ರತ್ಯಯಕ್ಕೆ ಉದಾಹರಣೆಯಾಗಿ ನೀಡಿದ್ದಾನೆ?

A) ಷಷ್ಠಿ ವಿಭಕ್ತಿ ಪ್ರತ್ಯಯ
B) ಸತಿ ಸಪ್ತಮಿ ವಿಭಕ್ತಿ ಪ್ರತ್ಯಯ
C) ಪಂಚಮಿ ವಿಭಕ್ತಿ ಪ್ರತ್ಯಯ
D) ತೃತೀಯ ವಿಭಕ್ತಿ ಪ್ರತ್ಯಯ

108. 'ಗದಾಯುದ್ಧ' ಕಾವ್ಯದ ನಾಯಕ.

A) ದುರ್ಯೋಧನ
B) ಧರ್ಮರಾಯ
C) ಶ್ರೀಕೃಷ್ಣ
D) ಭೀಮ

109. ಗುರು ಲಘು ಮೊದಲಲ್ಲಿ ಬರಲು _ _ _ ಗಣಮಕ್ಕುಂ

A) ಮನ
B) ಸತ
C) ಭಯ
D) ಜರ

110. "ಆರಂಕುಸವಿಟ್ಟೊಡಂ ನೆನೆವುದೆನ್ನ ಮನಂ ವನವಾಸಿ ದೇಶಮಂ" ಈ ಮಾತು ಬರುವ ಕೃತಿ

A) ಆದಿಪುರಾಣ
B) ವಿಕ್ರಮಾರ್ಜುನ ವಿಜಯ
C) ಭುವನೈಕ್ಯರಾಮಾಭ್ಯುದಯ
D) ಹರಿವಂಶಪುರಾಣ

111. ಅನುಕ್ರಮದ ಮಾದರಿ : ಕಾಲಾನುಕ್ರಮದ ರೀತ್ಯಾ ಸಮರ್ಪಕವಾದದ್ದನ್ನು ಗುರುತಿಸಿ.

A) ನಾಗಚಂದ್ರ, ನಯಸೇನ, ನೇಮಿಚಂದ್ರ, ಕರ್ಣಪಾರ್ಯ
B) ನಯಸೇನ, ನೇಮಿಚಂದ್ರ, ಕರ್ಣಪಾರ್ಯ, ನಾಗಚಂದ್ರ
C) ನಾಗಚಂದ್ರ, ನಯಸೇನ, ಕರ್ಣಪಾರ್ಯ, ನೇಮಿಚಂದ್ರ
D) ನೇಮಿಚಂದ್ರ, ನಾಗಚಂದ್ರ, ನಯಸೇನ, ಕರ್ಣಪಾರ್ಯ,

112. ಅನುಕ್ರಮದ ಮಾದರಿ : ಕಾಲಾನುಕ್ರಮದ ರೀತ್ಯಾ ಸಮರ್ಪಕವಾದ್ದನ್ನು ಗುರುತಿಸಿ.

A) ರಾಘವಾಂಕ, ಚಾಮರಸ, ಹರಿಹರ, ವಿರೂಪಾಕ್ಷ ಪಂಡಿತ
B) ಹರಿಹರ, ಚಾಮರಸ, ರಾಘವಾಂಕ, ವಿರೂಪಾಕ್ಷ ಪಂಡಿತ
C) ಹರಿಹರ, ರಾಘವಾಂಕ, ಚಾಮರಸ, ವಿರೂಪಾಕ್ಷ ಪಂಡಿತ
D) ಚಾಮರಸ, ಹರಿಹರ, ರಾಘವಾಂಕ, ವಿರೂಪಾಕ್ಷ ಪಂಡಿತ

113. 'ರಾಮಚಂದ್ರಚರಿತಪುರಾಣ' ಕೃತಿ ಯಾವ ರೂಪದಲ್ಲಿದೆ?

A) ಸಾಂಗತ್ಯ
B) ಷಟ್ಪದಿ
C) ಚಂಪೂ
D) ರಗಳೆ

114. ಇವುಗಳಲ್ಲಿ ಸರಿಯಾದುದನ್ನು ಗುರುತಿಸಿ.
   A) ಕೇಂದ್ರ ಆಹಾರ ಸಂಶೋಧನಾ ಸಂಸ್ಥೆ – ಕಾರವಾರ
   B) ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ – ಮಂಗಳೂರು
   C) ಸೆಂಟ್ರಲ್ ಫುಡ್ ಟೆಕ್ನಾಲಾಜಿಕಲ್ ರಿಸರ್ಚ್ ಇನ್ಸ್‌ಸ್ಟಿಟ್ಯೂಟ್ – ಬೆಂಗಳೂರು
   D) ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ನೋಟು ಮುದ್ರಣಾಲಯ – ಮೈಸೂರು

115. ಅಂಶಛಂದಸ್ಸಿನಲ್ಲಿ ಹೆಚ್ಚಾಗಿ ಕಂಡುಬರುವ ಗಣ ಯಾವುದು?
   A) ಬ್ರಹ್ಮಗಣ  B) ವಿಷ್ಣುಗಣ
   C) ರುದ್ರಗಣ  D) ಪದ್ಮಗಣ

116. ವಡಿಯೆಂಬ ಛಂದೋವಿಷಯದ ಪ್ರಸ್ತಾಪ ಕನ್ನಡದ ಯಾವ ಛಂದೋಗ್ರಂಥದಲ್ಲಿ ಮೊದಲು ಕಂಡುಬರುತ್ತದೆ?
   A) ಕವಿಜಿಹ್ವಾಬಂಧನ  B) ನಂದಿಛಂದಸ್ಸು
   C) ಛಂದೋಂಬುಧಿ  D) ಕವಿರಾಜಮಾರ್ಗ

117. 'ಎಪಿಗ್ರಾಫಿಯಾ ಕರ್ನಾಟಿಕಾ' ಸಂಪುಟಗಳನ್ನು ಹೊರತಂದ ಕೀರ್ತಿ ಇವರಿಗೆ ಸಲ್ಲುತ್ತದೆ.
   A) ಬಿ.ಎಲ್. ರೈಸ್  B) ಕರ್ನಲ್ ಮೆಕೆಂಜಿ
   C) ವಿಲಿಯಂ ಹೆನ್ನಿ ವರ್ಥ್  D) ಬಿ.ಎಚ್. ರೈಸ್

118. "ಯತಿಯೆಂಬುದುಸಿರ್ವ ತಾಣಂ"ಎಂದುಹೇಳಿರುವ ಶಾಸ್ತ್ರಕಾರ
   A) ಶ್ರೀವಿಜಯ  B) ಕೇಶಿರಾಜ
   C) ೧ನೇ ನಾಗವರ್ಮ  D) ೨ನೆಯ ನಾಗವರ್ಮ

119. 'ಸಂಶೋಧನೆ' ಇದು ಯಾರ ಕೃತಿ?
   A) ಎಂ.ಎಂ. ಕಲ್ಬುರ್ಗಿ  B) ಚಿ. ಸದಾಶಿವ
   C) ಬಿ.ವ್ಹಿ. ಶಿರೂರ  D) ಎಂ. ಚಿದಾನಂದಮೂರ್ತಿ

120. ಈ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ?
   A) ದುರ್ಗಸಿಂಹ – ಇಮ್ಮಡಿ ಜಯಸಿಂಹ  B) ರತ್ನಾಕರವರ್ಣಿ – ಕೃಷ್ಣದೇವರಾಯ
   C) ಸಿಂಗರಾರ್ಯ – ಇಮ್ಮಡಿತೈಲಪ  D) ನೇಮಿಚಂದ್ರ – ಚಿಕದೇವರಾಯ